# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- "ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲುಗಳ ವಿತರಣೆ" ಎಂಬ ಹೊಸ ಯೋಜನೆಯನ್ನು 2013-14ನೇ ಸಾಲಿನಿಂದ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವಿಕೆ.

ಓದಲಾಗಿದೆ:- ಪತ್ರ ಸಂಖ್ಯೆ:ಪಂವಾಯೋ (I)/42/2013-14, ದಿನಾಂಕ:25-07-2013 ಮತ್ತು 29-08-2013.

******

## ಪ್ರಸ್ತಾವನೆ

ರಾಜ್ಯ ಸರ್ಕಾರವು 2013-14ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಎರಡು ಸಾವಿರ ಒಳನಾಡು ಮೀನುಗಾರರಿಗೆ 'ಫೈಬರ್ ಗ್ಲಾಸ್' ಹರಿಗೋಲನ್ನು ನೀಡಲಾಗುವುದು ಎಂದು ಘೋಷಿಸಿದೆ.

ಮೇಲೆ ಓದಲಾದ ಪತ್ರಗಳಲ್ಲಿ, ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಬೆಂಗಳೂರುರವರು ಕರ್ನಾಟಕ ರಾಜ್ಯವು 2.93 ಲಕ್ಷ ಹೆಕ್ಟೇರ್ ವಿಸ್ತೀರ್ಣವುಳ್ಳ ಕೆರೆ, ಕೊಳಗಳನ್ನು ಮತ್ತು 2.72 ಲಕ್ಷ ಹೆಕ್ಟೇರ್ ವಿಸ್ತೀರ್ಣದ ಜಲಾಶಯಗಳನ್ನೊಳಗೊಂಡಂತೆ ಒಟ್ಟು 5.60 ಲಕ್ಷ ಹೆಕ್ಟೇರ್ ಒಳನಾಡು ಜಲಸಂಪನ್ಮೂಲವನ್ನು ಹೊಂದಿದ್ದು, ಮೀನು ಉತ್ಪಾದನೆಗೆ ವಿಪುಲ ಅವಕಾಶವನ್ನು ಒದಗಿಸಿದ್ದು, ರಾಜ್ಯದಲ್ಲಿ ಕೃಷ್ಣರಾಜಸಾಗರ, ಕಬಿನಿ, ನುಗು, ಹೇಮಾವತಿ, ಭದ್ರಾ, ತುಂಗಭದ್ರಾ, ಮಲಪ್ರಭಾ, ಘಟಪ್ರಭ, ನಾರಾಯಣಪುರ, ಆಲಮಟ್ಟಿ, ಲಿಂಗನಮಕ್ಕಿ ಮುಂತಾದ ಪ್ರಮುಖ ಜಲಾಶಯಗಳಿದ್ದು, ರಾಜ್ಯದಲ್ಲಿ 5813 ಕಿ.ಮೀ.ಗಳಷ್ಟು ನದಿ ಮತ್ತು ಅವುಗಳ ಉಪ ನದಿಗಳಿವೆ ಎಂದು ತಿಳಿಸಿರುತ್ತಾರೆ.

"ಹರಿಗೋಲು" ಒಂದು ಬಗೆಯ ಸಾಂಪ್ರದಾಯಿಕ, ಪ್ರಾಚೀನವಾದ ಮತ್ತು ಹಗುರವಾದ ಬಟ್ಟಲು ಆಕೃತಿಯ ದೋಣಿಯಾಗಿದ್ದು, ಆರಂಭದಲ್ಲಿ ಹುಲ್ಲಿನ ಕಟ್ಟು ಹಾಗೂ ಪ್ರಾಣಿಗಳ ತೊಗಲಿನ ಹೊದಿಕೆಯಿಂದ ತಯಾರಿಸಲಾಗುತ್ತಿತ್ತೆಂದು, ಕಾಲಕ್ರಮೇಣ ಹಾಸು ಹೊಕ್ಕಾಗಿ ಹೆಣೆದ ಬಿದಿರು ಹಾಗೂ ತೊಗಲಿನಿಂದ ತಯಾರಿಸಿದ ಹರಿಗೋಲುಗಳನ್ನು ಉಪಯೋಗಿಸಲಾಯಿತು. ಪ್ರಸ್ತುತ ಟಾರ್ ಅಥವಾ ಕೀಲೆಣ್ಣೆ ಲೇಪಿತ ಪ್ಲಾಸ್ಟಿಕ್ ಕವಚದ ಹರಿಗೋಲುಗಳನ್ನು ಉಪಯೋಗಿಸಲಾಗುತ್ತಿದ್ದು, ಬಿದಿರಿನಿಂದ ನಿರ್ಮಿಸಿದ ಹರಿಗೋಲುಗಳು ಸಾಮಾನ್ಯವಾಗಿ ಅತೀ ಕಡಿಮೆ ಬಾಳಿಕೆ ಬರುತ್ತವೆಂದು ಹಾಗಾಗಿ ಆಳನೀರಿನಲ್ಲಿ ಮೀನುಗಾರಿಕೆ ಮಾಡುವುದು ಜೀವ ರಕ್ಷಣೆ ದೃಷ್ಟಿಯಿಂದ ಅಪಾಯಕಾರಿಯಾಗಿರುವುದಲ್ಲದೆ ಇತ್ತೀಚಿನ ದಿನಗಳಲ್ಲಿ ಬಿದಿರಿನ ಲಭ್ಯತೆ ಕಡಿಮೆಯಾಗಿದ್ದು ಹರಿಗೋಲುಗಳನ್ನು ನಿರ್ಮಿಸಲು ಅಲಭ್ಯವಾಗುತ್ತಿದ್ದು, ಮೀನುಗಾರರ ಶ್ರೇಯೋಭಿವೃದ್ಧಿ ಮತ್ತು ಅವರ ಜೀವರಕ್ಷಣೆಯ ದೃಷ್ಠಿಯಿಂದ ಮೀನುಗಾರಿಕೆ ಇಲಾಖೆಯು "ಒಳನಾಡು ಮಿನುಗಾರರಿಗೆ ಫೈಬರ್‌ಗ್ಲಾಸ್ ಹರಿಗೋಲುಗಳ ವಿತರಣೆ" ಎಂಬ ನೂತನ ಕಾರ್ಯಕ್ರಮವನ್ನು ರೂಪಿಸಿದ್ದು, ಫೈಬರ್‌ಗ್ಲಾಸ್ ಹರಿಗೋಲುಗಳು ಸದೃಢವಾಗಿದ್ದು, ಮೀನುಗಾರರು ಆಳನೀರಿನಲ್ಲಿ ಮೀನುಗಾರಿಕೆಯಲ್ಲಿ ತೊಡಗಲು ಹಾಗೂ ಜೀವ ರಕ್ಷಣೆ ದೃಷ್ಟಿಯಿಂದ ಸಹಕಾರಿಯಾಗಿರುವುದಲ್ಲದೆ ದೀರ್ಘ ಬಾಳಿಕೆಯನ್ನು ನೀಡುತ್ತವೆಂದು ತಿಳಿಸಿರುತ್ತಾರೆ.

ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಒಳನಾಡು ಜಿಲ್ಲೆಗಳ ಕೆರೆ, ಜಲಾಶಯ ಹಾಗೂ ನದಿಭಾಗಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ 2000 ಮೀನುಗಾರರಿಗೆ ಸದರಿ ಯೋಜನೆಯಡಿ ತಲಾ ಒಂದು ಫೈಬರ್‌ಗ್ಲಾಸ್ ಹರಿಗೋಲು ಹಾಗೂ ಎರಡು ಹುಟ್ಟುಗಳನ್ನು ರೂ.10,000/- ಘಟಕ ವೆಚ್ಚದಲ್ಲಿ ಸುಮಾರು ರೂ.200.00 ಲಕ್ಷ ವೆಚ್ಚದಲ್ಲಿ ಉಚಿತವಾಗಿ ನೀಡಲು ಉದ್ದೇಶಿಸಲಾಗಿದ್ದು, 2013-14ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಗೆ ಯಾವುದೇ ಅನುದಾನ ಒದಗಿಸಿರುವುದಿಲ್ಲ. ಆದರೆ 2013-14ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಘೋಷಣೆ

ಮಾಡಿರುವುದರಿಂದ ಸದರಿ ನೂತನ ಯೋಜನೆಯ ಅನುಷ್ಠಾನಕ್ಕಾಗಿ ಹೆಚ್ಚುವರಿ ಅನುದಾನ ಒದಗಿಸ ಬೇಕಾಗಿರುವುದರಿಂದ, "ಒಳನಾಡು ಮೀನುಗಾರರಿಗೆ ಫೈಬರ್‌ಗ್ಲಾಸ್ ಹರಿಗೋಲುಗಳ ವಿತರಣೆ" ಎಂಬ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ಹಾಗೂ ಈ ಯೋಜನೆಯನ್ನು 2013-14ನೇ ಸಾಲಿನಿಂದ ಹೊಸದಾಗಿ ಕೈಗೊಳ್ಳುವುದರಿಂದ ಹೊಸ ಲೆಕ್ಕ ಶೀರ್ಷಿಕೆಯನ್ನು ನೀಡಿ ಅನುಬಂಧದಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಅನುಷ್ಠಾನ ಗೊಳಿಸಲು ರೂ.200.00 ಲಕ್ಷ ಅನುದಾನವನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಕೋರಿರುತ್ತಾರೆ.

ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಯೋಜನಾ ಇಲಾಖೆಯು ಹೆಚ್ಚುವರಿ ಮಾಹಿತಿಗಳನ್ನು ಕೋರಿರುತ್ತದೆ. ಆದರೆ, ದಿನಾಂಕ:31-08-2013ರಂದು ಯೋಜನಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು ಹಾಗೂ ಸಿ.ಆ.ಸು. (ಆ.ಸು.) ಇಲಾಖೆಯ ಕಾರ್ಯದರ್ಶಿಗಳನ್ನೊಳಗೊಂಡಂತೆ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುಕ್ತ ಸಮಿತಿಯು ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸಹಮತಿಸಿ ಕೂಡಲೇ ಆದೇಶವನ್ನು ಹೊರಡಿಸಲು ಸೂಚಿಸಿದ ಹಿನ್ನೆಲೆಯಲ್ಲಿ ಹಾಗೂ ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ.

**ಆದೇಶ ಸಂಖ್ಯೆ:ಪಸಂಮೀ/168/ಮೀಇಯೋ/2013, ಬೆಂಗಳೂರು ದಿನಾಂಕ:31-08-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2013-14ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭಿಸಿರುವ **"ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲುಗಳ ವಿತರಣೆ"** ಯೋಜನೆಗೆ ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವ ಸಹಾಯಧನ ಮಂಜೂರು ಮಾಡುವ ಕಾರ್ಯವಿಧಾನ, ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಯೋಜನೆಯನ್ನು ಅನುಷ್ಠಾನಗೊಳಿಸಲು ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಸಾಮಗ್ರಿಗಳ ಖರೀದಿ ವಗೈರೆಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ನಿಯಮಗಳು 2000ಗಳನ್ನು ತಪ್ಪದೇ ಪಾಲಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ/45/ಪಿಎಫ್‌ಓ/2013 ದಿನಾಂಕ:17-08-2013ರಲ್ಲಿ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/469/ವೆಚ್ಚ-4/2013, ದಿನಾಂಕ:31-08-2013ರಲ್ಲಿ ಹಾಗೂ ದಿನಾಂಕ:31-08-2013ರಂದು ಅಪರ ಮುಖ್ಯ ಕಾರ್ಯದರ್ಶಿ ಯವರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುಕ್ತ ಸಮಿತಿಯ ನಿರ್ಣಯದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಿ.ಜಯಣ್ಣ) 31/8
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

**ಇವರಿಗೆ:**

1) ಮಹಾಲೇಖಪಾಲರು (ಎ ಮತ್ತು ಇ)(ಎಯು-1 ಮತ್ತು 2), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
5) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4). ವಿಧಾನಸೌಧ, ಬೆಂಗಳೂರು.
6) ಮಾನ್ಯ ಯುವಜನ ಸೇವಾ ಮತ್ತು ಮೀನುಗಾರಿಕೆ ರಾಜ್ಯ ಸಚಿವರ ಆಪ್ತ ಕಾರ್ಯದಶಿಗಳು.
7) ಸಮನ್ವಯ/ವಾರಪತ್ರಿಕೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಆದೇಶ ಸಂಖ್ಯೆ:ಪಸಂಮೀ/168/ಮೀಇಯೋ/2013, ಬೆಂಗಳೂರು ದಿನಾಂಕ:31-08-2013ರ

## ಅನುಬಂಧ

## ಷರತ್ತು ಮತ್ತು ನಿಬಂಧನೆಗಳು

********

1) ಸದರಿ ಯೋಜನೆಯ ಲಾಭ ಪಡೆಯುವ ಪ್ರತಿಯೊಬ್ಬ ಫಲಾನುಭವಿಯು ಮೀನು ಹಿಡಿಯುವ ವೃತ್ತಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರತಕ್ಕದ್ದು.

2) ಸದರಿ ಫಲಾನುಭವಿಯು ಮೀನುಗಾರಿಕೆ ಸಹಕಾರ ಸಂಘದಲ್ಲಿ ಕಳೆದ 3 ವರ್ಷಗಳಿಂದ ಸದಸ್ಯನಾಗಿದ್ದು, ಮೀನುಗಾರಿಕೆ ವೃತ್ತಿ ಕೈಗೊಂಡಿರತಕ್ಕದ್ದು.

3) ಸದರಿ ಫಲಾನುಭವಿಯು ಕೆರೆ/ನದಿ/ಜಲಾಶಯಗಳಲ್ಲಿ ಮೂರು ವರ್ಷಗಳಿಂದ ಅಧಿಕೃತವಾಗಿ ಮೀನುಗಾರಿಕೆ ಕೈಗೊಂಡಿರತಕ್ಕದ್ದು.

4) ಸಹಾಯಧನ ಪಡೆಯಲು ಫಲಾನುಭವಿಯು ಒಮ್ಮೆ ಮಾತ್ರ ಅರ್ಹರಾಗಿರುತ್ತಾರೆ.

5) ಒಂದು ಕುಟುಂಬಕ್ಕೆ ಆಯಾ ವರ್ಷದಲ್ಲಿ ಓರ್ವರು ಮಾತ್ರ ಸಹಾಯಧನ ಪಡೆಯಲು ಅರ್ಹರಾಗುತ್ತಾರೆ.

## ಸಹಾಯಧನ ಮಂಜೂರು ಮಾಡುವ ಕಾರ್ಯವಿಧಾನ

1. ಸಹಾಯಧನವನ್ನು ಕೋರಿ ಬಂದ ನಿಗದಿತ ನಮೂನೆಯಲ್ಲಿನ ಅರ್ಜಿಗಳನ್ನು ತಾಲ್ಲೂಕಿನ ಮೀನುಗಾರಿಕೆ ಅಧಿಕಾರಿಯವರು ಪರಿಶೀಲಿಸಿ ವಿವರಗಳು ಸರಿಯಿರುವ ಬಗ್ಗೆ ದೃಢೀಕರಿಸಿ, ಜಿಲ್ಲಾ ಮಟ್ಟದ ಅಧಿಕಾರಿಯವರಿಗೆ ಒಂದು ವಾರದೊಳಗಾಗಿ ಮಂಜೂರಾತಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.
2. ಸಹಾಯಧನ ಕೋರಿ ಬಂದ ಅರ್ಜಿಗಳನ್ನು, ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಯು ಮತ್ತೊಮ್ಮೆ ಪರಿಶೀಲಿಸಿ ವಿವರಗಳನ್ನು ದೃಢೀಕರಿಸಿ ಒಂದು ವಾರದೊಳಗಾಗಿ ಮೀನುಗಾರಿಕೆ ಉಪನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.
3. ಸಹಾಯಧನವನ್ನು ಮಂಜೂರು ಮಾಡುವ ಅಧಿಕಾರವು ಆಯಾ ವಲಯದ ಮೀನುಗಾರಿಕೆ ಉಪನಿರ್ದೇಶಕರಲ್ಲಿ ಪ್ರದತ್ತವಾಗಿರುತ್ತದೆ.
4. ಮೀನುಗಾರಿಕೆ ನಿರ್ದೇಶನಾಲಯದಿಂದ e-procurement ಮೂಲಕ ಹರಿಗೋಲುಗಳ ಖರೀದಿಸಲು L-1 ದರವನ್ನು ನಿಗದಿಪಡಿಸಲಾಗುವುದು.
5. ಹರಿಗೋಲನ್ನು ಸಂಬಂಧಪಟ್ಟ ತಾಲ್ಲೂಕು ಮಟ್ಟದ ಮೀನುಗಾರಿಕೆ ಇಲಾಖೆಯ ಅಧಿಕಾರಿಗಳು ನಿಯಮಾನುಸಾರ ಸಾದಿಲ್ವಾರು ಬಿಲ್ಲುಗಳ ಮೂಲಕ ಖರೀದಿಸಿ ಫಲಾನುಭವಿಗಳಿಗೆ ಸಾರ್ವಜನಿಕ ಸಮಾರಂಭಗಳಲ್ಲಿ ಚುನಾಯಿತ ಪ್ರತಿನಿಧಿಗಳ ಸಮ್ಮುಖದಲ್ಲಿ ವಿತರಿಸತಕ್ಕದ್ದು.
6. ಫಲಾನುಭವಿಯು ಯೋಜನೆಯಡಿ ಪಡೆದ ಹರಿಗೋಲನ್ನು ಮೀನುಗಾರಿಕೆಯಲ್ಲಿ ತೊಡಗಿರುವಾಗ ಸಮರ್ಪಕವಾಗಿ ಬಳಸತಕ್ಕದ್ದು. ಹಾಗೂ ಈ ಬಗ್ಗೆ ಇಲಾಖಾಧಿಕಾರಿಗಳು 3 ತಿಂಗಳಿಗೊಮ್ಮೆ ಪರಿಶೀಲಿಸಿ ದೃಢೀಕರಿಸಿಕೊಳ್ಳತಕ್ಕದ್ದು.

7. ಫಲಾನುಭವಿಯು ಸರ್ಕಾರದಿಂದ ಸಹಾಯಧನವಾಗಿ ಪಡೆದ ಫೈಬರ್‌ಗ್ಲಾಸ್ ಮತ್ತು ಹರಿಗೋಲನ್ನು ಮಾರಾಟ/ಪರಭಾರೆ/ಗುತ್ತಿಗೆ ನೀಡುವುದಿಲ್ಲವೆಂಬ ಬಗ್ಗೆ ಅಫಿಡವಿಡ್ ಪಡೆಯುವುದು.

(ಜಿ.ಜಯಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಕರ್ನಾಟಕ ಸರ್ಕಾರ
(ಮೀನುಗಾರಿಕೆ ಇಲಾಖೆ)

**"ಒಳನಾಡು ಮೀನುಗಾರರಿಗೆ ಫೈಬರ್‌ಗ್ಲಾಸ್ ಹರಿಗೋಲು ವಿತರಣೆ" ಯೋಜನೆಯಡಿ ಸಹಾಯ ಪಡೆಯಲಿಚ್ಛಿಸುವ ಮೀನುಗಾರರು ಭರ್ತಿ ಮಾಡಬೇಕಾದ ಅರ್ಜಿ ನಮೂನೆ**

ಇತ್ತೀಚಿನ ಭಾವಚಿತ್ರ

| | | |
|---|---|---|
| 1 | ಅರ್ಜಿದಾರನ ಹೆಸರು | |
| 2 | ವಿಳಾಸ | ........................................................ |
| 3 | ಅರ್ಜಿದಾರರು ಮೀನು ಹಿಡಿಯುವ ವೃತ್ತಿಯಲ್ಲಿ ಸಕ್ರಿಯವಾಗಿ ತೊಡಗಿದ್ದಾರೆಯೇ? | ಹೌದು/ಇಲ್ಲ |
| 4 | ಕಳೆದ 3 ವರ್ಷಗಳಿಂದ ಸದಸ್ಯರಾಗಿರುವ ಬಗ್ಗೆ ಮೀನುಗಾರಿಕೆ ಸಹಕಾರ ಸಂಘದ ಸದಸ್ಯತ್ವದ ದೃಢೀಕರಣ ಪತ್ರ ಲಗತ್ತಿಸಿದೆಯೇ? | ಹೌದು/ಇಲ್ಲ |
| 5 | ಕೆರೆ/ನದಿ/ಜಲಾಶಯಗಳಲ್ಲಿ 3 ವರ್ಷಗಳಿಂದ ಅಧಿಕೃತವಾಗಿ ಮೀನುಗಾರಿಕೆ ಕೈಗೊಂಡಿದ್ದಾರೆಯೇ? | ಹೌದು/ಇಲ್ಲ |
| 6 | ಅರ್ಜಿದಾರರು ಪರಿಶಿಷ್ಟ ಜಾತಿ/ಪಂಗಡ ಅಥವಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ್ದಾರೆಯೇ? ಹೌದಾದಲ್ಲಿ, ದಾಖಲೆ ಒದಗಿಸುವುದು. | |
| 7 | ಇತರೆ ಮಾಹಿತಿ ಏನಾದರೂ ಇದ್ದಲ್ಲಿ | |

ದಿನಾಂಕ:
ಸ್ಥಳ:

ಅರ್ಜಿದಾರರ ಸಹಿ

---

**ಕಛೇರಿ ಉಪಯೋಗಕ್ಕಾಗಿ ಮಾತ್ರ**

1. ಅರ್ಜಿ ಸ್ವೀಕರಿಸಿದ ದಿನಾಂಕ:
2. ಎಲ್ಲಾ ಷರತ್ತುಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಮಾಹಿತಿ ಹೌದು/ಇಲ್ಲ:
3. ಷರಾ

ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)
..................... ತಾಲ್ಲೂಕು